ಮಂನವಿಗಳು

ಶ್ರೀ ಎಸ್. ಸೂರ್ಯನಾರಾಯಣ ರಾವ್.—ವಿಕ್ರಾಂತ್ ಟೈರ್ಸ್ ಕಾರ್ಖಾನೆಯ ಕಾರ್ಮಿಕರು ಒಂದೂವರೆ ಮೈಲಿಯಿಂದ ನಡೆದುಕೊಂಡು ಬಂದಿದ್ದಾರೆ. ಈ ಬಗ್ಗೆ ಹೇಳ್ಕನೆಯಲ್ಲಿ ಉತ್ತರ ಕೊಟ್ಟಿದ್ದಾರೆ. ೭ ಕೋಟಿ ರೂಪಾಯಿ ಲುಕ್ಸಾನಾಯಿತು ಎಂದು ಬೇಗಮುದ್ರೆ ಹಾಕಿದ್ದಾರೆ.

MR. SPEAKER.—If the Hon'ble Minister is ready to make a statement, I have no objection.

SRI AZEEZ SAIT.—I want to say something...

MR. SPEAKER.—We have granted Leave of Absence to you.

SRI AZEEZ SAIT.—It is from tomorrow Sir, I don't confuse the House. The House has granted me leave from tomorrow. I am ready to do the official job now.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಸಚಿವರು ಇಂಗ್ಲೀಷಿನಲ್ಲಿ ಏಕೆ ಮಾತನಾಡುತ್ತಿದ್ದಾರೆ ?

ಅಧ್ಯಕ್ಷರು.—ಅರ್ಥವಾಗದಿರುವ ಕನ್ನಡಕ್ಕಿಂತ ಇಂಗ್ಲೀಷ್ ಉತ್ತಮವಲ್ಲವೇ ?

SRI AZEEZ SAIT –If I speak in Kannada, I commit lot of mistakes and therefore I want to say in English. Sir, it is very unforturnate that there is a partial lockout in Vikrant. Vikrant is a very prestigious industry as far as Government of Karnataka is concerned. It has got very sophisticated machineries and it has also got a very good name...

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಮಾತನಾಡಬೇಕು.

ಶ್ರೀ ಅಜೀಜ್ ಸೇಠ್.—ಮಾನ್ಯ ನಾರಾಯಣ ಕುಮಾರ್ ಅವರು ಅದೃಷ್ಟವಶಾತ್ ಕನ್ನಡದ ಪರಿಸರದಲ್ಲಿ ಹುಟ್ಟಿ ಬೆಳೆದು ಅದೇ ಸಂಸ್ಕೃತಿಯಲ್ಲಿ ತೇಲಿ ಬಂದವರು. ನಾನು ಬಹುಶಃ ಉರ್ದು ಪರಿಸರದಲ್ಲಿ ಹುಟ್ಟಿ ಬೆಳೆದು ಬಂದಿರುವುದನ್ನು ನನ್ನ ತಂದೆ ತಾಯಿಗಳು ನನಗೆ ಕನ್ನಡ ಓದಿಸಲಿಲ್ಲ. ಆದರೆ ನನ್ನ ಮಕ್ಕಳು ಮೊಮ್ಮಕ್ಕಳು ಕನ್ನಡದಲ್ಲಿ ಮಾತನಾಡುತ್ತಾರೆ, ಅಷ್ಟಕ್ಕೆ ಸಂತೋಷಪಡಬೇಕು. ಈ ವಿಷಯ ಟಿಕ್ಕಿಕಲ್ಲಾಗಿರುವುದರಿಂದ ಕನ್ನಡದಲ್ಲಿ ಮಾತನಾಡಿದರೆ ತಪ್ಪಾಗಬಹುದು. ಆದ್ದರಿಂದ ಇಂಗ್ಲೀಷಿನಲ್ಲಿ ಮಾತನಾಡುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಅಜೀಜ್ ಸೇಠರು ಬೇರೆ ರಾಜ್ಯದಿಂದ ಬಂದಿಲ್ಲ, ಬೇಕು ಎಂದು ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದಾರೆ. ಅವರು ಗೋಕಾಕ್ ವರದಿ ವಿರುದ್ಧ ಹೇಳಿದ್ದಾರೆ, ಅವರು ಕನ್ನಡದಲ್ಲಿ ಮಾತನಾಡಬೇಕು.

SRI AZEEZ SAIT.—Sir, I won't take much time of the House. I only appeal to Hon'ble Memher Sri Suryanarayana Rao...

(INTERRUPTION)

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಮಂತ್ರಿಗಳು ಮೈಸೂರಿನಲ್ಲಿ ಹುಟ್ಟಿ ಬೆಳೆದವರು.

SRI AZEEZ SAIT.—I will ask the Labour Commissioner to hold a meeting and also ask the Management to lift the lock-out. I don't want to make it a very big issue and I have also requested my friend Sri Bommai...

(INTERRUPTION)

ಶ್ರೀ ಜಿ. ನಾರಾಯಣ ಕುಮಾರ್.—ಇದು ಕನ್ನಡ ದ್ರೋಹ, ದಯವಿಟ್ಟು ಬೇಡಿ.

MR. SPEAKER.—I cannot force him to speak in Kannada.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ರಾಜ್ಯಾಂಗದಲ್ಲಿ ಮಾತೃಭಾಷೆಯಲ್ಲಿ ಮಾತನಾಡಬೇಕು ಎಂದು ಇದೆ. ಕನ್ನಡ ಬಾರದೇ ಇದ್ದರೆ ಇಂಗ್ಲೀಷಿನಲ್ಲಿ ಮಾತನಾಡಲಿ. ಈ ರೀತಿ ಒತ್ತಾಯ ಮಾಡಿದರೆ ದೇಶದ ಘನತೆಗೆ ಚ್ಯುತಿ ತಂದಂತಾಗುತ್ತದೆ. ಅವರು ? ಇಂಗ್ಲೀಷಿನಲ್ಲಿ ಮಾತನಾಡಲಿ, ನಾವು ಕೇಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಒಂದು ಸಲಹೆ. ಮಾನ್ಯ ನಾರಾಯಣ ಕುಮಾರ್ ಅವರು ಕನ್ನಡದಲ್ಲಿ ಮಾತನಾಡಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಮಾನ್ಯ ಸಚಿವರು ಕನ್ನಡ ಭಾಷೆಯನ್ನು ಬಳಸಿದರೆ ತೊಂದರೆಯಾಗುವುದಿಲ್ಲ, ಬಹಳ ತಾಪತ್ರಯದ ಕೆಲಸ ಆಗುತ್ತದೆ. ಒಂದು ಸಾರಿ ಶಿವಮೊಗ್ಗದಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ, ಕೇಂದ್ರ ಸರ್ಕಾರ ನಿರ್ಮಾಣವಾಗುವವರೆಗೂ ಸಮಾಧಾನವಿಲ್ಲ ಎನ್ನುವುದಕ್ಕೆ ಬದಲಾಗಿ ನಿರ್ನಾಮವಾಗುವವರೆಗೂ ಸಮಾಧಾನವಿಲ್ಲ ಎಂದು ಭಾಷಣ ಮಾಡಿದರು.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಕನ್ನಡದಲ್ಲಿ ಮಾತನಾಡಬೇಕು.

MR. SPEAKER.—Mr. Narayana Kumar, please resume your seat.

SRI AZEEZ SAIT.—Mr. Suryanarayana Rao is an esteemed labour leader and he will realise the problem...

ಅಧ್ಯಕ್ಷರು.—ಹೌದು, ಆ ರೀತಿ ತಪ್ಪುಗಳಾಗುತ್ತವೆ.

ಶ್ರೀ ಎಸ್. ಬಂಗಾರಪ್ಪ.—ಈ ರೀತಿಯಾದ ಕನ್ನಡದಲ್ಲಿ ಅವರು ಮಾತನಾಡುವುದು ಬೇಡ. ಬೇಡ ಅಂದರೆ ಕನ್ನಡವನ್ನು ಅವರು ಕಲಿತಂ ಮಾತನಾಡಬೇಕು. ಕನ್ನಡದಲ್ಲಿ ಮಾತನಾಡುವುದು ಬೇಡ ಅಂದರೆ ಆಗುವುದಿಲ್ಲ, ಇದು ಕರ್ನಾಟಕ ಇದೆ. ಆದುದರಿಂದ ತಾವು ದಯವಿಟ್ಟು ಕನ್ನಡವನ್ನು ಕಲಿತು ಆದಮೇಲೆ ವ್ಯಾಕರಣ ಬದ್ಧವಾಗಿ ಮಾತನಾಡಿ. ಅಲ್ಲಿಯವರೆಗೂ ಯಾವ ಭಾಷೆಯಲ್ಲಾದರೂ ಮಾತನಾಡಿ. ನಿಮ್ಮ ನೀತಿ ನಮಗೆ ಗೊತ್ತಾಗಿದೆ.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಕನ್ನಡದಲ್ಲಿ ಮಾತನಾಡಬೇಕು. ಇಂಗ್ಲೀಷ್ ನಮಗೆ ಬೇಕಾಗಿಲ್ಲ, ಅವರು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತಾರೆ, ಅವರು ಕನ್ನಡನಾಡಿನವರೇ ಅಲ್ಲವೇ ?

ಅಧ್ಯಕ್ಷರು.—ಇದು ಸರಿಯಾದ ಕ್ರಮವಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಗೋಕಾಕ್ ವರದಿ ವಿರುದ್ಧ ಈಗಾಗಲೇ ಹೇಳಿದ್ದಾರೆ

ಅಧ್ಯಕ್ಷರು.—ನೀವು ಹೀಗೆ ಮಾಡುತ್ತಾ ಇದ್ದರೆ ನಾನು ಕಾರ್ಯಾಚರಣೆ ಮಾಡಬೇಕಾಗುತ್ತದೆ, ದಯವಿಟ್ಟು ಆದಕ್ಕೆ ಅವಕಾಶ ಕೊಡಬೇಡಿ. ನಾನು ಅವರನ್ನು ಒತ್ತಾಯ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ಕನ್ನಡ ಮಾನ್ಯ ನಾರಾಯಣ ಕುಮಾರ್‌ರವರ ಸ್ವತ್ತು ಮಾತ್ರವಲ್ಲ, ಎಲ್ಲರಿಗೂ ಸಂಬಂಧಪಟ್ಟಿದ್ದಾಗಿದೆ. ಮಾನ್ಯ ಮಂತ್ರಿಗಳು ಇಂಗ್ಲೀಷಿನಲ್ಲಿ ಮಾತನಾಡಲಿ ನಾವು ಕೇಳುತ್ತೇವೆ.

ಶ್ರೀ ಜಿ. ನಾರಾಯಣ ಕುಮಾರ್.—ತಾವು ಹೇಳಬೇಕು.

ಅಧ್ಯಕ್ಷರು.—ನಾನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಮಂತ್ರಿಗಳು ಕನ್ನಡ ಮಾತನಾಡುತ್ತಾರೆ, ಅವರಿಗೆ ಕನ ಡ ಏಕೆ ಬರುವುದಿಲ್ಲ ?

ಅಧ್ಯಕ್ಷರು.—ಇಂಗ್ಲೀಷಿನಲ್ಲಿ ಮಾತನಾಡುವುದಕ್ಕೆ ಅವಕಾಶವಿರುವಾಗ ನಾನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ನಾರಾಯಣಕುಮಾರ್ ವರಿಗೆ ಕನ್ನಡದ ಬಗ್ಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಇದೆ, ಅಭಿಮಾನವಿದೆ, ಯಾರೂ ಕನ್ನಡದ ವಿರೋಧಿಗಳು ಇಲ್ಲ. ಇಲ್ಲಿರತಕ್ಕದ್ದು ಕಾರ್ಮಿಕರ ಪ್ರಶ್ನೆ...

ಶ್ರೀ ಜಿ. ನಾರಾಯಣಕುಮಾರ್.—ಎಷ್ಟು ಜನ ಕಾರ್ಮಿಕರು ಇಂಗ್ಲೀಷ್‌ನವರು ಇದ್ದಾರೆ ಸ್ವಾಮಿ ?

ಅಧ್ಯಕ್ಷರು.—ದಯವಿಟ್ಟು ಸಹಕರಿಸಿ. ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ದಯವಾಡಿ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

( ಗೊಂದಲ )

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಜೀಜ್ ಸೇಠ್‌ರವರು ಗೋಕಾಕ್ ವರದಿಯ ವಿರುದ್ಧ ಹೇಳಿಕೆಯನ್ನಿ ಕೊಟ್ಟಿದ್ದಾರೆ.

( ಗೊಂದಲ )

ಶ್ರೀ ಎಂ. ಮಹದೇವ.—ನನ್ನದೊಂದು ಕ್ರಿಯಾಲೋಪ ಸ್ವಾಮಿ. ಮಾನ್ಯ ಅಜೀಜ್‌ಸೇಠ್‌ರವರು ಬಹಳ ಗಂಭೀರವಾದ ವಿಚಾರದ ಬಗ್ಗೆ ಸದನದಲ್ಲಿ ಹೇಳಿಕೆಯನ್ನು ಕೊಡುತ್ತಿರುವಾಗ ಒಬ್ಬರಿಗೋಸ್ಕರ ಇಡೀ ಸದನದ ಸಮಯವನ್ನು ಹಾಳು ಮಾಡುವುದು ಬೇಡ. ಆದುದರಿಂದ ಮಾನ್ಯ ಅಜೀಜ್‌ಸೇಠ್ ರವರು ಯಾವ ಭಾಷೆಯಲ್ಲಿ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರೋ ಆ ಭಾಷೆಯಲ್ಲಿಯೇ ಅವರು ತಮ್ಮ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

SRI AZEEZ SAIT.—I appeal to the hon. Member Sri Suryanarayana Rao, who is a Labour Leader—if he realises and bears in mind the interest of workmen and also the industry we can solve these problems. I have written to the management about the strike and they are prepared to negotiate with the Union and also negotiate with them for lifting the lockout. I understand it is a partial lockout.

ಶ್ರೀ ಜಿ. ನಾರಾಯಣಕುಮಾರ್.—ಕನ್ನಡಕ್ಕೆ ವಿರುದ್ಧವಾಗಿದ್ದಾರೆ * ಎಂದು ಹೇಳಿ ಪ್ರತಿಭಟಿಸಿ ನಾನು ಹೊರಕ್ಕೆ ಹೋಗುತ್ತಿದ್ದೇನೆ.

(*The hon. member withdraw from the House*)

SRI AZEEZ SAIT,—I once again appeal to the Workers not to go in for rally. It is an unnecessary exercise, loss of money, loss of time etc., I would like to inform the hon, Member I have also written a letter to the Industries Minister without failure.

ಶ್ರೀ ಎಂ. ರಾಮಪ್ಪ —ಅಧ್ಯಕ್ಷರೇ, ಇಲ್ಲಿ ಬೇರೆ ಬೇರೆ ಭಾಷೆ ಬರತಕ್ಕ ಸದಸ್ಯರುಗಳು ಇದ್ದಾರೆ. ಈಗ ತಾವು ಮಾನ್ಯ ಸಚಿವರಿಗೆ ಇಂಗ್ಲೀಷ್‌ನಲ್ಲಿಯೇ ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದೇ ರೀತಿಯಾಗಿ ಅವರು ಮಾತನಾಡುತ್ತಿರಬೇಕಾದರೆ, ಮಾನ್ಯ ಸದಸ್ಯರು ಅವರಿಗೆ ಏನೆಂದು ಹೇಳಿ ವಾಕ್‌ಔಟ್ ಮಾಡಿದ್ದಾರೆ. ಆ ಪದವನ್ನು ಕಡತದಿಂದ ತೆಗೆದು ಹಾಕಿಸಬೇಕು.

---

* ಅಧ್ಯಕ್ಷರ ಅಪ್ಪಣೆ ಮೇರೆಗೆ ಪದಗಳನ್ನು ತೆಗೆದಂಹಾಕಲಾಗಿದೆ.

ಶ್ರೀ ಎಂ.ಎಸ್. ಕೃಷ್ಣನ್.—ಕನ್ನಡಕ್ಕೆ ದ್ರೋಹ ಮಾಡತಕ್ಕ ಕೆಲಸವನ್ನು ಯಾರೂ ಇಲ್ಲ ಮಾಡಿಲ್ಲ, ಎಲ್ಲರಿಗೂ ಕನ್ನಡದ ಬಗ್ಗೆ ಅಭಿಮಾನವಿದೆ. ಆದುದರಿಂದ ಮಾನ್ಯ ಸದಸ್ಯರು ಹೇಳಿರತಕ್ಕ ಪದವನ್ನು ಕಡತದಿಂದ ತೆಗೆಸಿ ಹಾಕಿಸಬೇಕು.

ಅಧ್ಯಕ್ಷರು.—ಆ ಪದವನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎಂ, ಸೂರ್ಯನಾರಾಯಣ ರಾವ್.—ಓಪರ್ ಟೈಮ್ ಅಲೋಯನ್ಸ್ ಕೊಡಬೇಕೆಂದ ಕೇಳಿರತಕ್ಕದ್ದು ಸಿ.ಐ.ಟಿ.ಯು. ನವರು ಅದಕ್ಕೆ ನಾವು ವಿರುದ್ಧವಾಗಿದ್ದೇವೆ. ಮಾನ್ಯತೆ ಪಡೆದ ಸಂಘದವರಂ ಕೇಳದೇ ಈ ರೀತಿಯಾಗಿ ಲಾಕ್‌ಔಟ್ ಮಾಡಿರುವುದು ಸರಿಯೊದುದಲ್ಲ. ಇಂಡಿಸಿಪ್ಲಿನ್ ಎಂದು ಜನರಲ್ ಆಗಿ ಎಲ್ಲರಿಗೂ ಅನ್ವಯಿಸುವ ಹಾಗೆ ಹೇಳತಕ್ಕದ್ದು ಸರಿಯೆಲ್ಲ. ಇದರಿಂದಾಗಿ ಕೋಟ್ಯಾಂತರ ರೂಪಾಯಿಗಳು ಲಕ್ಸಾನಂ ಆಗುತ್ತಿದೆ. ಆದುದರಿಂದ ಮಾನ್ಯ ಮಂತ್ರಿಗಳವರು ಕೂಡಲೇ ಲಾಕ್‌ಔಟ್‌ನ್ನು ತೆಗೆಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEEZ SAIT.—Even now without elaborating and taking much time of the House, I appeal to the hon. Member Sri Surayanarayana Rao to sit across the table and discuss with the management so that lock-out is lifted early. As far as I know what the management says is that there is lot of indiscipline among the workers and every workers is demanding overtime which is nowhere in practice. What the country now needs is discipline and more productivity. I therefore request hon. Member Sri Suryanarayana Rao to have a talk with the management and settle the issues. I have also written to the Labour Commissioner to arrange for a negotiation between the workers and the management. I have also written a letter to the Industries Minister. Since I have no time at my disposal I have asked them to have a joint meeting in this regard. So, let us all work for more productivity and discipline whether it is in public sector or private sector. This is very necessary in the interest of the country and the economy. This is what I wanted to say.

ಶ್ರೀ ಎಂ. ಎಸ್. ಕೃಷ್ಣನ್.—ನಾನೊಂದು ನೋಟೀಸ್‌ನ್ನು ಕಳುಹಿಸಿದ್ದೇನೆ. ಅದು ಇಂಜನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟದ್ದು. ಅದು ಯಾವ ರೂಪದಲ್ಲಿ ಚರ್ಚೆಗೆ ಬರುತ್ತದೆಯೋ ಗೊತ್ತಿಲ್ಲ. ಆದರೆ ಇದು ಬಹಳ ಗಹನವಾದ ವಿಷಯವಾಗಿದೆ.

ಅಧ್ಯಕ್ಷರು.—ಅದನ್ನು ಅಡ್ಮಿಟ್ ಮಾಡಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಅದನ್ನು ತಾವು ಅಡ್ಮಿಟ್ ಮಾಡಿರಬಹುದು. ಆದರೆ ಅದು ಇಲ್ಲಿ ಯಾವಾಗ ಚರ್ಚೆಗೆ ಬರುತ್ತದೋ ಗೊತ್ತಿಲ್ಲ. ಇದು ಬಹಳ ಗಹನವಾದ ವಿಷಯವಾಗಿದೆ. ವರ್ಷೇ ವರ್ಷೇ ಎಗ್ಸಾಮಿನೇಷನ್‌ಗಳು ಮುಂದಕ್ಕೆ ಹೋಗುತ್ತಿವೆ. ಇದರಿಂದಾಗಿ ಹುಡುಗರಿಗೆ ಬಹಳ ತೊಂದರೆಯಾಗುತ್ತಿದೆ.

ಅಧ್ಯಕ್ಷರು.—ಅಯಿತು ಅದನ್ನು ಅಡ್ಮಿಟ್ ಮಾಡಿದ್ದೇವೆಂದು ಹೇಳಿದ್ದೇನೆ, ಇದರ ಬಗ್ಗೆ ಯಾವ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ನೋಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ನಾನೊಂದು ನೋಟೀಸ್‌ನ್ನು ೩೦ ಕ್ಕೆಳಗೆ ಕಳುಹಿಸಿ ಕೊಟ್ಟಿದ್ದೇನೆ. ಸಂಖ್ಯಾರಂ ೨೩೩ ಸಾವಿರ ಜನ ಎಂ. ಎಸ್, ಕೆ. ಮಿಲ್ಸ್‌ನವರು ಕೆಲವು ಡಿಮ್ಯಾಂಡ್‌ಗಳನ್ನು ಇಟ್ಟು ೮ ನೇ ತಾರೀಖಿನ ದಿವಸದಿಂದ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ.

ಈ ಸಮಸ್ಯೆ ಕೂಡ ಬಹಳ ಗಂಭೀರವಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI AZEEZ SAIT.—Sir, I would like to submit that I can deal easily with all the labour leaders who are well versed with the Labour laws and Legislation including MLAs. Now, hon. Member Kharge raised some demands of the workers of MSK Mills, Gulbarga. I have not seen those demands. I do not know what actually the problem is. I have not heard about the lock-out of the mill.

SRI MALLIKARJUNA KHARGE.—I have not said about lock-out. I have said about the charter of demands of the workers. They have already issued notice to the Labour Department in this regard. They have also submitted their demands to the Government for considerrtion.

SRI AZEEEZ SAIT.—I appeal to the hon. Member to send them to me. I will immediately take action.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಹಕ್ಕುಬಾಧ್ಯತಾ ಚ್ಯುತಿ ನಿರ್ಣಯವನ್ನು ಮಂಡಿಸಲು ತಮ್ಮ ಅನುಮತಿಗಾಗಿ ಒಂದು ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಆ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಇವತ್ತಿನ ಕನ್ನಡ ಪ್ರಭಾ ಪತ್ರಿಕೆಯಲ್ಲಿ ಕೂಡ ಬಂದಿದೆ.

ಅಧ್ಯಕ್ಷರು.— ಈಗತಾನೇ ನನಗೆ ನೋಟಿಸ್ ಬಂದಿದೆ. ಅದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ನೋಟೀಸನ್ನು ಪ್ರತಿ ಪಕ್ಷದ ನಾಯಕರು ಕಳುಹಿಸಿದ್ದಾರೆ. ಎರಡನ್ನೂ ಸೇರಿಸಿ ನಾಳೆ ತೆಗೆದುಕೊಳ್ಳೋಣ.

ಶ್ರೀ ಎಸ್. ಬಂಗಾರಪ್ಪ.— ಆಗಬಹುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ — ಬಾಗಲಕೋಟೆ ಮುಳುಗಡೆ ವಿಚಾರವಾಗಿ ನಾನು ರೂಲ್ ೩೩ಳಿರ ಕೆಳಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಆ ಬಗ್ಗೆ ಸರ್ಕಾರದವರು ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆಂಬುದನ್ನು ಸದನದಲ್ಲಿ ತಿಳಿಸಿದರೆ ಸೂಕ್ತ.

ಶ್ರೀ ಎಂ. ವೀರಪ್ಪ ಮೊಯಿಲಿ .—ನಾನು ಬಹಳ ಪ್ರಮುಖವಾದ ವಿಚಾರದ ಬಗ್ಗೆ ರೂಲ್ ೬೮ರ ಕೆಳಗೆ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಆ ವಿಚಾರದ ಗಂಭೀರತೆ ಏನು ಎಂಬುದನು ಹೇಳಬಯಸುತ್ತೇನೆ.

ಅಧ್ಯಕ್ಷರು.— ಈಗತಾನೇ ಕೊಟ್ಟಿದ್ದೀರಿ. ಅದನ್ನು ನಾನು ಇನ್ನೂ ನೋಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಇವತ್ತು ನಾಳೆಯೊಳಗೆ ಸರ್ಕಾರದವರು ಆಜ್ಞೆ ಮಾಡಂತ್ತಾರೆ. ಆದ್ದರಿಂದ, ವಿಷಯವನ್ನು ಸಂಕ್ಷಿಪ್ತವಾಗಿ ತಮ್ಮ ಮತ್ತು ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಅನೇಕ ಶತಮಾನಗಳಿಂದ ತುಳಿತಕ್ಕೆ ಒಳಗಾಗಿರತಕ್ಕ ಹರಿಜನ–ಗಿರಿಜನರಿಗೆ ಬಡ್ತಿ ಕೊಡುವ ಬಗ್ಗೆ...

ಅಧ್ಯಕ್ಷರು.— ಈಗ ತಾವು ವಿಷಯವನ್ನು ಎತ್ತಿದರೆ ಮತ್ತೊಂದು ಸಾರಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲದಂತಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಕ್ಷಮಿಸಬೇಕು. ವಿಷಯವನ್ನು ಸ್ವಲ್ಪ ಹೇಳಿಬಿಡುತ್ತೇನೆ. ಇವತ್ತಲ್ಲ ನಾಳೆ ಸರ್ಕಾರದವರು ಆದಕ್ಕೆ ದಸ್ಕತ್ತು ಹಾಕಿಬಿಟ್ಟರೆ ಮುಂದೆ ಬಹಳ ಕಷ್ಟವಾಗುತ್ತದೆ. ಹಿಂದಿನ ಸರ್ಕಾರದವರು ಹರಿಜನ ಗಿರಿಜನರಿಗೆ ಬಡ್ತಿ ಕೊಡತಕ್ಕ ಸಂದರ್ಭದಲ್ಲಿ ಕ್ವಾಲಿಫೈಯಿಂಗ್

ಸರ್ವೀಸ್ ೫ ವರ್ಷ ಇದ್ದುದನ್ನು ೩ ವರ್ಷಕ್ಕೆ ಇಳಿಸಿದ್ದರಿಂದ ಅನೇಕರಿಗೆ ಬಡ್ತಿಯ ಅವಕಾಶ ದೊರೆಯಿತು. ಆದರೆ ಈಗ ಅದನ್ನು ೩ ರಿಂದ ೫ ವರ್ಷಕ್ಕೆ ಹಾಕಬೇಕೆಂದು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಇವತ್ತಲ್ಲ ನಾಳೆ ಅದರ ಬಗ್ಗೆ ಆಜ್ಞೆ ಆದಮೇಲೆ ನಮ್ಮ ಪ್ರಶ್ನೆ ವ್ಯರ್ಥವಾಗುತ್ತದೆ. ಸರ್ಕಾರದವರು ಕೂಡಲೇ ಅದನ್ನು ತಡೆಹಿಡಿಯಬೇಕು. ೫ ರಿಂದ ೩ ವರ್ಷಕ್ಕೆ ಇಳಿಸಿದರೆ ಬಹಳ ಅನ್ಯಾಯವಾಗುತ್ತದೆ. ಹರಿಜನ-ಗಿರಿಜನರ ಬಗ್ಗೆ ಕೊಟ್ಟಿರತಕ್ಕ ವರದಿಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ. ಆದರೂ ಇವತ್ತು ಅವರಿಗೆ ಅನ್ಯಾಯ ಮಾಡುತ್ತಿದ್ದಾರೆ. ಆದ್ದರಿಂದ, ಈ ಬಗ್ಗೆ ಅವರು ಮಾಡುತ್ತಿರುವ ಹುಕುಂ ಅನ್ನು ಕೂಡಲೇ ತಡೆಹಿಡಿಯಬೇಕೆಂದು ಹೇಳುತ್ತೇನೆ.

ಶ್ರೀ ಜೆ.ಪಿ. ಒಡೆಯರಾಜ್.— ಆ ಬಗ್ಗೆ ಸ್ಕ್ರೀನಿಂಗ್ ಕೂಡ ಮಾಡಿದ್ದಾರೆ. ಕ್ವಾಲಿಫೈಯಿಂಗ್ ಸರ್ವೀಸ್ ಅನ್ನು ೩ ರಿಂದ ೫ ವರ್ಷಕ್ಕೆ ಏರಿಸಿದ್ದಾರೆ. ರೂಲನ್ನು ಕಡೆಗಣಿಸಿ ಸ್ಕ್ರೀನಿಂಗ್ ಮಾಡಿದ್ದಾರೆ. ಮತ್ತು ಹರಿಜನ ಗಿರಿಜನ ಅಧಿಕಾರಿಗಳನ್ನು ಬಿಟ್ಟು ಕ್ರಮ ಕೈಗೊಳ್ಳುತ್ತಿದ್ದಾರೆ. ಅದಕ್ಕೋಸ್ಕರ ಈ ಪ್ರಶ್ನೆ ಬಂದಿದೆ.

ಅಧ್ಯಕ್ಷರು.— ಆ ಬಗ್ಗೆ ನಿಮ್ಮ ನಾಯಕರು ಹೇಳಿದ್ದಾರೆ. ಈಗ ಸಂಭಂಧಪಟ್ಟ ಮಂತ್ರಿಗಳೂ ಕೂಡ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.— ಮಂತ್ರಿಗಳನ್ನು ಕರೆಸಿದರೆ ಒಳ್ಳೆಯದಾಗಬಹುದು.

ಅಧ್ಯಕ್ಷರು.— ನೀವು ಹಿರಿಯ ಸದಸ್ಯರಾದ ನಿಮಗೆ ಗೊತ್ತಿದೆ. ಅವರಿಗೆ ಇನ್ನೂ ನೋಟೀಸ್ ಹೋಗಿಲ್ಲ. ತಕ್ಷಣ ಕರೆಸಿ ಎಂದರೆ, ಸದನದಲ್ಲಿ ಕೆಲವು ನಿಯಮಗಳೇನಿವೆ ಅದನ್ನು ಪಾಲನೆ ಮಾಡ ಬೇಕಾಗುತ್ತದೆ.

ಶ್ರೀ ಜೆ.ಪಿ. ಒಡೆಯರಾಜ್.— ಸರ್ಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ.

ಅಧ್ಯಕ್ಷರು.— ತಂದಿದ್ದೀರಿ ಬಿಡಿ. ಈಗ ಚುನಾವಣೆಗಳ ಪ್ರಸ್ತಾವಕ್ಕೆ ಹೋಗೋಣ.

ಶ್ರೀ ಜೆ.ಪಿ. ಒಡೆಯರಾಜ್.— ನಾನು ರೂಲ್ ೩೩೪ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ನಾನು ರೂಲ್ ೬೮ರ ಕೆಳಗೆ ಒಂದು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.— ಎಲ್ಲದಕ್ಕೂ ರೂಲ್ ೬೮ರ ಕೆಳಗೆ ನೋಟೀಸ್ ಕಳುಹಿಸಿ ಪ್ರಸ್ತಾಪ ಮಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ಸಹಕರಿಸಬೇಕು. ಹಿರಿಯ ಸದಸ್ಯರಾಗಿ ಹೀಗೆ ಮಾಡಿದರೆ ಹೇಗೆ?

ಶ್ರೀ ಎಂ. ವೀರಪ್ಪ ಮೊಯಿಲಿ.— ಎಲ್ಲದಕ್ಕೂ ಗದಾ ಪ್ರಹಾರ ಮಾಡುತ್ತೀರಲ್ಲ.

ಶ್ರೀ ಎಸ್. ಬಂಗಾರಪ್ಪ.— ನಾನು ಈ ವಿಷಯದ ಬಗ್ಗೆ ರೂಲ್ ೩೩೪ರ ಪ್ರಕಾರ ನೋಟೀಸ್ ಕಳುಹಿಸಿದ್ದೇನೆಯೇ ಹೊರತು ೬೮ರ ಪ್ರಕಾರ ಕಳುಹಿಸಿಲ್ಲ.

ಅಧ್ಯಕ್ಷರು.— ೧೧-೬೫ಕ್ಕೆ ನೋಟೀಸ್ ಕಳುಹಿಸಿ ಈಗ ವಿಷಯವನ್ನು ಪ್ರಸ್ತಾಪಿಸುತ್ತೇನೆಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ.— ನನಗೆ ವಿಷಯ ಗೊತ್ತಾದ ತಕ್ಷಣ ಕಳುಹಿಸಿದ್ದೇನೆ. ನಾಳೆ ದಿವಸ ಆಜ್ಞೆ ಹೊರಟರೆ ಕಷ್ಟವಾಗುತ್ತದೆ.

ಅಧ್ಯಕ್ಷರು.— ಈಗ ವಿಷಯವನ್ನು ಪ್ರಸ್ತಾಪ ಮಾಡಿದರೆ ಪುನಃ ಚರ್ಚೆಸುವ ಅವಕಾಶ ತಪ್ಪಿ ಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನಾನು ಚರ್ಚೆಯ ವಿವರಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ರೂಲ್ ೬೮ರ ಕೆಳಗೆ ಚರ್ಚೆಗೇ ಅವಕಾಶ ಕೇಳಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ನಾವು ಚರ್ಚೆಗೆ ಕಾಲಾವಕಾಶವನ್ನು ಕೇಳಿದಾಗ ಅದನ್ನು ಗೊತ್ತು ಮಾಡುವುದು ತಮಗೆ ಬಿಟ್ಟದ್ದು. ಆದರೆ ರಾಜ್ಯಪಾಲರ ಹತ್ತಿರ ಸಹಿಗೆ ಏನು ಒಂದು ಆಜ್ಞೆ ಹೋಗಿದೆ ಅದು ಇಶ್ಯೂ ಆದರೆ ನಾಳೆ ಕೋರ್ಟಿಗೆ ಹೋಗಬೇಕಾಗುತ್ತದೆ.

ಅಧ್ಯಕ್ಷರು.—ಎರಡೂ ವಿಚಾರಗಳನ್ನು ಅವರು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹೇಳಿದ್ದರೆ ಸಂತೋಷ. ವಿಷಯವನ್ನು ಚರ್ಚೆಗೆ ತಗೆದುಕೊಳ್ಳುವುದು ತಮಗೆ ಬಿಟ್ಟದ್ದು. ತೀರ್ಮಾನ ಮಾಡಿ, ಆದರೆ ಸರ್ಕಾರದವರು ಹೇಳಿಕೆ ಕೊಡುವ ವಿಚಾರದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕಾಗುವುದಿಲ್ಲವೆಂದು ಏನು ಹೇಳಿದ್ದೀರಿ ಆದ್ದರಿಂದ ನಮಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು.—ನಿಯಮಾವಳಿಯ ವ್ಯಾಪ್ತಿಯಲ್ಲಿ ಸರ್ಕಾರವನ್ನು ಒತ್ತಾಯಿಸುವುದಕ್ಕೆ ನನಗೆ ಅವಕಾಶ ಇಲ್ಲ; ಮತ್ತು ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಎಸ್. ಬಂಗಾರಪ್ಪ —ಇದು ಜರೂರು ಮತ್ತು ಪ್ರಮುಖವಾದ ವಿಷಯವಾಗಿರುವುದರಿಂದ ದಯಮಾಡಿ ಸರ್ಕಾರದ ಪರವಾಗಿ ಹೇಳಬೇಕು. ಇದು ಜರೂರಾತಿ ವಿಷಯವಾಗಿರುವುದರಿಂದ ಇದರ ಬಗ್ಗೆ ಹೇಳಿಕೆ ಕೊಡುತ್ತೇವೆಂಬ ಸೌಜನ್ಯತೆಯ ಉತ್ತರವನ್ನಾ ಈಗಿರತಕ್ಕ ಮಂತ್ರಿಮಂಡಲದ ಸದಸ್ಯರ ಪೈಕಿ ಯಾರಾದರೂ ಒಬ್ಬರು ಹೇಳಿದರೆ ಸಾಕು, ಈ ಬಗ್ಗೆ ಇವತ್ತು ನಮಗೆ ತಿಳಿಸುತ್ತೇವೆಂದು ಹೇಳಬೇಕು. ಜೊತೆಗೆ ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ಆಜ್ಞೆ ಹೊರಡಿಸುವುದಾದರೆ ಒಳ್ಳೆಯದು ಅದಕ್ಕಿಂತ ಮೊದಲು ಈ ಮನೆಯ ಸದಸ್ಯರನ್ನು ಕೇಳಿ ಮಾಡುತ್ತೇವೆಂಬ ಮಾತು ಕೊಟ್ಟರೆ ನಮಗೆ ಸುಲಭವಾಗುತ್ತದೆ. ಈ ಮಾತನ್ನು ಸರ್ಕಾರದವರು ಹೇಳದಿದ್ದರೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ರೂಲ್ ೩೩ರ ಪ್ರಕಾರ ಸದನದ ಮತ್ತು ಸರ್ಕಾರದ ಗಮನವನ್ನು ಸೆಳೆಯಲು ಬಹುದೇ ಹೊರತು ಸರ್ಕಾರವನ್ನು ಉತ್ತರ ಕೊಡಿ ಎಂದು ಒತ್ತಾಯಿಸುವ ಹಾಗೆ ಇಲ್ಲ. ಈ ಸಂಸ್ಥೆಯ ಗಂಭೀರತೆಯನ್ನು ಅರ್ಥ ಮಾಡಿಕೊಂಡು ತಾವು ಕಳುಹಿಸಿರುವ ನೋಟೀಸನ್ನು ಗವರ್ನಮೆಂಟಲ್ಲಿಟ್ಟುಕೊಂಡು ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಜಿ. ಪಿ. ಒಡೆಯರಾಜ್.—ಇದರಿಂದ ಸರ್ಕಾರಕ್ಕೆ ಅನುಕಂಪ ಇಲ್ಲವೆಂದು ಸ್ಪಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಜ್ಞೆ ಹೊರಟುಬಿಟ್ಟರೆ ನಾಳೆ ಕೋರ್ಟಿಗೆ ಹೋಗಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಗೋರ್ಕಲ್ಲ ಮೇಲೆ ನೂರ್ಕಾಲ ಮಳೆ ಹೊಯ್ದ ಹಾಗೆ ನಿಮಗೆ ನೂರು ಸಾರಿ ಹೇಳಿದರೂ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ನೋಟೀಸ್ ಕೊಟ್ಟು ಮಂತ್ರಿಗಳು ಇಲ್ಲದಿದ್ದರೆ ಆಕ್ಷೇಪಣೆ ಮಾಡುವುದು ಸರಿ. ಈಗತಾನೆ ನೋಟೀಸ್ ಬಂದಿದೆ. ತಕ್ಷಣ ಉತ್ತರ ಹೇಳಿ ಎಂದರೆ ಅದು ಸಾಧ್ಯವಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ನಾವು ಈಗಲೇ ಉತ್ತರ ಕೊಡಿ ಎಂದು ಕೇಳುತ್ತಿಲ್ಲ, ಅದನ್ನು ತಡೆಹಿಡಿಯಿರಿ ಎಂದು ಕೇಳುತ್ತಿದ್ದೇವೆ,

ಅಧ್ಯಕ್ಷರು.—ನಾನು ಅದನ್ನು ಇನ್ನೂ ವಿಚಾರ ಮಾಡಿಲ್ಲ. ತಾವು ಈಗತಾನೇ ನೋಟೀಸ್ ಕಳುಹಿಸಿದ್ದೀರಿ.

೧೨-೩೦ ಪಿ.ಎಂ.

ಶ್ರೀ ವೈ. ರಾಮಕೃಷ್ಣ.—ಈಗಲೇ ರಿಲೀಫ್ ಕೊಡಿ ಎಂದು ಕೇಳುತ್ತಿಲ್ಲ. ಇದನ್ನು ತಡೆಹಿಡಿಯಿರಿ ಎಂದು ಹೇಳುತ್ತಿದ್ದೇವೆ. ಇದನ್ನು ಸರ್ಕಾರದವರಿಗೆ ದಯವಿಟ್ಟು ತಿಳಿಸಿ.

ಅಧ್ಯಕ್ಷರು.—ತಮ್ಮ ಕಳಕಳಿಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾಳೆ ನಾಡಿದ್ದು ಕಾರ್ಯಕಲಾಪದ ಪಟ್ಟಿಯಲ್ಲಿ ಇದನ್ನು ಹಾಕಿ ಉತ್ತರ ತರಿಸುತ್ತೇನೆ ಎಂಬ ಮಾತನ್ನು ತಾವು ಹೇಳುತ್ತಿದ್ದೀರಿ, ಗಡಿ ವಿಷಯದ ಬಗ್ಗೆಯೂ ನಾನು ಪ್ರಸ್ತಾಪ ಮಾಡಿದಾಗ ಮೂರು ನಾಲ್ಕು ದಿವಸದಲ್ಲಿ ಉತ್ತರ ಕೊಡಿಸುತ್ತೇನೆ ಎಂದು ಹೇಳಿದಿರಿ.

ಆದರೂ ಸಿಗಲಿಲ್ಲ. ಒಂದು ಸಾರಿ ಮುಖ್ಯಮಂತ್ರಿಗಳಿಲ್ಲ ಎಂದು ಹೇಳಿದಿರಿ. ಮುಖ್ಯಮಂತ್ರಿಗಳು ಸಭೆಗೆ ಬಂದು ಹೋಗಿದ್ದರೂ ನಮಗೆ ಉತ್ತರ ಸಿಗಲಿಲ್ಲ. ಹೀಗಾದರೆ ನಾವು ಈ ಸದನದಲ್ಲಿ ಏತಕ್ಕಾಗಿ ಪ್ರಸ್ತಾಪ ಮಾಡಬೇಕು ?

ಅಧ್ಯಕ್ಷರು.—ತಾನೇ ನಿರ್ಣಯಿಸಿದ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಕೆಲಸ ಮಾಡಂವುದಕ್ಕೆ ನನ್ನನ್ನು ಇಲ್ಲಿ ಕೂರಿಸಿದ್ದೀರಿ. ಬೇರೆ ಬೇರೆ ವಿಧಿ ನಿಯಮಗಳನ್ನು ಆಳವಡಿಸಿದ್ದೀರಿ. ಷಿಷಿಳನೇ ವಿಧಿಯಂತೆ ಕಳುಹಿಸುವ ನೋಟೀಸ್ ಗಮನ ಸೆಳೆಯುವಂಥದ್ದೇ ಹೊರತು ಮಂತ್ರಿಗಳಿಗೆ ಉತ್ತರ ಹೇಳಿ ಒತ್ತಾಯ ಮಾಡುವುದಕ್ಕಾಗುವುದಿಲ್ಲ. ಆದರೂ ತಾವು ಪುನಃ ಪುನಃ ಒತ್ತಾಯಿಸಿದರೆ ನಾನು ಸಭೆ ಹೇಗೆ ನಡೆಸಬೇಕೆಂಬುದನ್ನು ತಾವೇ ತೀರ್ಮಾನ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ನಿಯಮಾವಳಿಗಳನ್ನು ನಾವೇ ಮಾಡಿದ್ದು. ಆ ನಿಯಮಾವಳಿಗಳ ವ್ಯಾಪ್ತಿಯಲ್ಲಿ ತಾವು ಅಧಿಕಾರ ಚಲಾವಣೆ ಮಾಡಬೇಕಾಗಿದೆ. ಅದಕ್ಕೆ ನಾವೇ ತಮಗೆ ಅಧಿಕಾರ ಕೊಟ್ಟಿದ್ದೇವೆ. ತಾವು ಹೇಳಿದುತೆ ನಡೆದುಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ನಾವು ಜರೂರಾದ, ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದಾಗ ಸರ್ಕಾರ ಸೌಜನ್ಯಪೂರ್ವಕವಾಗಿ ಹೇಳಿಕೆ ಕೊಡುವುದಕ್ಕೆ ಮುಂದೆ ಬರಬೇಕು. ನಾನು ಎಲ್ಲ ವಿಷಯಗಳಿಗೂ ಒತ್ತಾಯ ಮಾಡುವುದಿಲ್ಲ. ಇತಿಮಿತಿಯನ್ನು ನಾನು ಅರಿಯಬೇಕು. ತಾವು ಅನೇಕ ಬಾರಿ ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ ಎಂಬ ಮಾತನ್ನು ಪದೇಪದೇ ಹೇಳುತ್ತಾ ಇರುವುದರಿಂದ ನಾವು ಹೇಳಬೇಕಾಗಿಲ್ಲ ಎಂಬ ಧೋರಣೆಯನ್ನು ಮಂತ್ರಿಮಂಡಲದ ಸದಸ್ಯರು ತಾಳಿರುವುದನ್ನು ಈ ಸದನದಲ್ಲಿ ನಾವು ಕಣ್ಣಾರೆ ಕಂಡಿದ್ದೇವೆ. ಆದರಲ್ಲಿ ಅನುಮಾನ ಬೇಕಾಗಿಲ್ಲ. ಈಗಾಗಲೇ ಆ ರೀತಿ ಮಾನಸಿಕ ಬೆಳವಣಿಗೆ ಆಗಿದೆ.

ಅಧ್ಯಕ್ಷರು.—ಈಗತಾನೇ ನೋಡಿದ್ದೀರಿ. ಎರಡು ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ ತಾವು ಈ ರೀತಿ ಅಬ್ಸರ್ವೇಷನ್ ಮಾಡುವುದಕ್ಕೆ ಕಾರಣವಿಲ್ಲ.

ಶ್ರೀ ಎಸ್. ಬಂಗಾರಪ್ಪ—ಅವರೊಬ್ಬರೇ ಉತ್ತರ ಕೊಟ್ಟಿದ್ದನ್ನು ನಾನು ಕಂಡಿದ್ದು.

ಅಧ್ಯಕ್ಷರು.—ನಿನ್ನೆ ಕೂಡ ಅಂಥ ಸಮಸ್ಯೆ ಬಂದಾಗ ವಿದ್ಯಾಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.— ಆ ರೀತಿ ಉತ್ತರ ಪಡೆಯಬೇಕಾದರೆ ನಮ್ಮ ಪರಿಸ್ಥಿತಿ ಏನಾಯಿತು ಎಂಬುದನ್ನು ತಾವು ಕಣ್ಣಾರೆ ಕಂಡಿದ್ದೀರಿ. ಮಾನ್ಯ ಲಕ್ಷ್ಮೀಸಾಗರ್ ಅವರೇ ನಿಮ್ಮನ್ನೇ ನಾನು ಅಧ್ಯಕ್ಷರ ಮೂಲಕ ನೇರವಾಗಿ ಕೇಳುತ್ತೇನೆ. ಸರ್ಕಾರಿ ಆಜ್ಞೆ ಇಷ್ಯೂ ಆಗುವ ವಿಚಾರದಲ್ಲಿ ಏನು ಹೇಳುತ್ತೀರಿ?

ಶ್ರೀ ಎ. ಲಕ್ಷ್ಮೀಸಾಗರ್.— ನೋಟೀಸ್ ಈಗತಾನೇ ನಮ್ಮ ಕೈಗೆ ಬಂದಿದೆ. ಅದರಲ್ಲಿ ಏನು ಹೇಳಿದ್ದಾರೆ ಎಂಬುದನ್ನು ನೋಡೋಣ,

ಶ್ರೀ ಎಸ್.ಬಂಗಾರಪ್ಪ.— ಸದನದಲ್ಲೇ ಹೇಳಿದ್ದೇವಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಏನು ಬರೆದಿದ್ದೀರಿ ಎಂಬುದನ್ನು ನೋಡಬೇಕಲ್ಲ.

ಶ್ರೀ ಜಿ.ಪಿ. ಒಡೆಯರಾಜ್.— ಕನಿಷ್ಠ ಅರ್ಹತೆ ೩ ವರ್ಷ ಇರುವುದನ್ನು ೫ ವರ್ಷಕ್ಕೆ ಏರಿಸುತ್ತಿದ್ದಾರೆ. ಈ ರೀತಿಯಾಗಿ ಸರ್ಕಾರಿ ಆಜ್ಞೆ ಆಗುತ್ತಿದೆ. ಅದನ್ನು ತಡೆಹಿಡಿಯಿರಿ ಎಂದು ಹೇಳುತ್ತಿದ್ದೇವೆ. ನಮ್ಮ ಸರ್ಕಾರದವರು ೫ ವರ್ಷ ಇದ್ದುದನ್ನು ೩ ವರ್ಷ ಮಾಡಿದ್ದರು ೧೯೮೨ರ ಸೆಪ್ಟೆಂಬರ್‌ನಲ್ಲಿ ೫ ವರ್ಷ ಇರುವುದನ್ನು ಮೂರು ವರ್ಷಕ್ಕೆ ಇಳಿಸಿದ್ದೇವೆ. ಆದು ಸರ್ಕಾರಿ ಆಜ್ಞೆಯಾಗಿ ಇಂಪ್ಲಿಮೆಂಟ್ ಆಗಿದೆ. ಆದರೆ ಈಗ ಈ ಸರ್ಕಾರದವರು ಮೂರು ವರ್ಷದ ಬದಲು ೫ ವರ್ಷ ಎಂದು ಮಾಡುತ್ತಿದ್ದಾರೆ. ಅದನ್ನು ತಡೆಹಿಡಿಯಬೇಕು. ಈ ರೀತಿ ಹರಿಜನ ಗಿರಿಜನರಿಗೆ ಕಲ್ಲು ಹಾಕತಕ್ಕ ವಾತಾವರಣ ಏನಿದೆ ಇದು ಸರಿಯಲ್ಲ. ನಮ್ಮ ಸ್ನೇಹಿತರು ಹೇಳಿದಂತೆ ನಾವು ಏನು ಹೇಳಿದರೂ ಕೂಡ ಈ ಸರ್ಕಾರಕ್ಕೆ ''ಗೋರ್ಕಲ್ಲ ಮೇಲೆ ಮಳೆ ಹುಯ್ದಂತೆ'' ಆಗುತ್ತದೆ.

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೆ, ತಾವು ತಮ್ಮ ಅಧಿಕಾರವನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ತಾವು ಸರ್ಕಾರಕ್ಕೆ ಹೇಳಬಹುದು.

ಅಧ್ಯಕ್ಷರು.— ಖಿಖಿಳನೇ ನಿಯಮದ ಪ್ರಕಾರ ಒಂದೆರಡು ವಿಚಾರವನ್ನು ಪ್ರಸ್ತಾಪ ಮಾಡಿದರೆ ಪರವಾಗಿಲ್ಲ. ಆದರೆ ಪ್ರತಿನಿತ್ಯವೂ ಹತ್ತು ಹತ್ತು ನೋಟೀಸ್‌ಗಳನ್ನು ಕಳುಹಿಸಿದರೆ ಹೇಗೆ ತೆಗೆದು ಕೊಳ್ಳುವುದು? ಇದರಲ್ಲಿ ಕೆಲವನ್ನು ಪ್ರಶ್ನೆ ರೂಪದಲ್ಲಿ ಕಳುಹಿಸಬಹುದು. ಕೆಲವು ಅರ್ಜೆಂಸ್ಸಿ ಇರತಕ್ಕ ವಿಚಾರವನ್ನು ಕಳುಹಿಸಿದ್ದೀರಿ. ನಿಮ್ಮ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಪ್ರಸ್ತಾಪ ಮಾಡಿದ್ದೀರಿ. ಈಗಲೇ ಎಲ್ಲಾ ಆಗಬೇಕೆಂದರೆ ಹೇಗೆ? ದಯವಿಟ್ಟು ಮುಂದಿನ ಕಾರ್ಯಕಲಾಪ ಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಗೊವಿಂದ ಪಿ. ಒಡೆಯರಾಜ್.— ಹರಿಜನ ಗಿರಿಜನರ ಬಗ್ಗೆ ತಾವು ಹೀಗೆ ಹೇಳಿದರೆ ಹೇಗೆ? ಇದು ಇಡೀ ಸರ್ಕಾರಿ ಸೇವೆಗೆ ಸಂಬಂಧಿಸಿದ ವಿಷಯ.

ಅಧ್ಯಕ್ಷರು.— ಹೇಳಿದ್ದಾಯಿತಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಇಷ್ಟು ಜನ ಮಂತ್ರಿಗಳಿದ್ದಾರೆ. ಏನೂ ಹೇಳು ವುದಕ್ಕಾಗುವುದಿಲ್ಲವೆ?

ಶ್ರೀ ವಂಲ್ಲಿಕಾರ್ಜುನ ಖಾರ್ಗೆ.— ಆಜ್ಞೆ ಇಷ್ಟೂ ಆದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು.— ಅದಕ್ಕಾಗಿಯೇ ತಮ್ಮ ಪರವಾಗಿ ನಾನು ಮಂತ್ರಿಗಳ ಗಮನ ಸೆಳೆಯುತ್ತೇನೆ ಎಂದು ಹೇಳಿದ್ದೇನೆ, ಅದಕ್ಕೂ ಸಮಾಧಾನವಾಗದಿದ್ದರೆ ಹೇಗೆ?

ಶ್ರೀ ಶಿವಮೂರ್ತಿ.— ಸರ್ಕಾರಿ ಆಜ್ಞೆ ಆಗದಂತೆ ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡುವ ಭರವಸೆಯನ್ನು ಕೊಡಿ.

SRI A. LAKSHMI SAGAR.— Sir, I beg to move:-

(Interruption)

ಶ್ರೀ ಗೋವಿಂದ ಪಿ. ಒಡೆಯರಾಜ್.— ಸ್ವಾಮಿ, ನಾನು ರೂಲ್ ಖಿಖಿಳರ ಪ್ರಕಾರ ಒಂದು ನೋಟೀಸ್ ಕೊಟ್ಟಿದ್ದೇನೆ. ವಿಷಯ ಏನೆಂದರೆ ಬೆಂಗಳೂರಿನಲ್ಲಿರುವ ಒಕ್ಕಲಿಗರ ಸಂಘ ಹಾಸ್ಟಲ್‌ನಲ್ಲಿ ೧೨೦ ವಿದ್ಯಾರ್ಥಿಗಳನ್ನು ಅಕ್ರಮವಾಗಿ ವಾಸವಾಗಿದ್ದಾರೆಂದು ಎವಿಕ್ಟ್ ಮಾಡಿಸಿದ್ದಾರೆ. ೩೧ ಕೊಠಡಿಯಲ್ಲಿರತಕ್ಕ ಎಲ್ಲ ವಿದ್ಯಾರ್ಥಿಗಳನ್ನೂ ಹೊರಕ್ಕೆ ಹಾಕಿದ್ದಾರೆ. ಪತ್ರಿಕೆಯಲ್ಲಿ ಓದಿದ ವರದಿ ಪ್ರಕಾರ ಇದರಲ್ಲಿ ಕ್ಯಾಬಿನೆಟ್ ದರ್ಜೆ ಮಂತ್ರಿಗಳ ಕೈವಾಡ ಇದೆ.

ಶ್ರೀ ಪಿ. ರಾಮಂದೇವ್.— ಇದೇನು ಹೊಸ ಸಂಪ್ರದಾಯ ಹಾಕುತ್ತಿದ್ದೀರಲ್ಲಾ?

ಶ್ರೀ ಗೋವಿಂದ ಪಿ. ಒಡೆಯರಾಜ್.— ಸಿವಿಲ್ ನೇಚರ್ ಡಿಸ್ಪ್ಯೂಟ್ ಇರುವುದರಿಂದ ಪೋಲೀಸರು...

ಅಧ್ಯಕ್ಷರು.— ಇದರಲ್ಲಿ ಅರ್ಜೆಂಸ್ಸಿ ಏನಿದೆ? ಪ್ರಸ್ತಾಪ ಮಾಡಿದ್ದೀರಿ. ಬಿಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಪೋಲೀಸರು ಹೋಗಿ ಕ್ರಮ...

ಅಧ್ಯಕ್ಷರು.— ತಾವು ಸಹಕರಿಸದಿದ್ದರೆ ಕಷ್ಟವಾಗುತ್ತದೆ.

SRI GOVINDA P. VODEYARAJ.— All those students are literally on the streets. ೧೨೦ ವಿದ್ಯಾರ್ಥಿಗಳು ರಸ್ತೆಯಲ್ಲಿದ್ದಾರೆ. ಅವರಿಗೆ ಏನು ರಕ್ಷಣೆ ಕೊಡುತ್ತೀರಿ? ಸರ್ಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಜೆ ಡಿ. ಸೋಮಪ್ಪ.— ಸ್ವಾಮಿ, ಬೆಂಗಳೂರಿನ ನಾಗರೀಕರಿಗೆ ಸರಬರಾಜು ಮಾಡುತ್ತಿರುವ ಅಕ್ಕಿಯನ್ನು ಇಲ್ಲಿ ತಂದಿದ್ದೇನೆ, ಇಂಥ ಕೆಟ್ಟ ಅಕ್ಕಿಯನ್ನು ಸರಬರಾಜು ಮಾಡಿದರೆ ಜನ ಹೇಗೆ ತಿನ್ನುವುದು? ಇದನ್ನು ಆಹಾರ ಖಾತೆ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು.— ಸೋಮಪ್ಪನವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜೆ.ಡಿ. ಸೋಮಪ್ಪ.— ಕಾರ್ಪೊರೇಷನ್ ಚುನಾವಣೆಯಾಗುವವರೆಗೆ ಒಳ್ಳೆಯ ಅಕ್ಕಿಯನ್ನು ಕೊಟ್ಟು ಈಗ ಇಂಥ ಅಕ್ಕಿಯನ್ನು ಕೊಡುತ್ತಿದ್ದಾರೆ ಎಂದು ಜನ ಹೇಳುತ್ತಿದ್ದಾರೆ. ಇದನ್ನು ದಯವಿಟ್ಟು ನೋಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಮಾನ್ಯ ಅಧ್ಯಕ್ಷರೇ, ಪಾವಗಡ ತಾಲ್ಲೂಕಿನಲ್ಲಿ ನಿನ್ನೆ ಒಂದು ಘಟನೆಯಾಗಿದೆ. ಅಲ್ಲಿ ದೆವ್ವ ಇದೆಯೋ, ತೋಳ ಇದೆಯೋ, ಏನಿದೆಯೋ ಗೊತ್ತಿಲ್ಲ. ಆದರೆ ಪ್ರಾಣಿ ಮಂಕ್ಕಳನ್ನು ಸಾಯಿಸಿ ಕೆಲವು ಮಕ್ಕಳಿಗೆ ಗಾಯ ಮಾಡಿದೆ. ಅಲ್ಲಿ ಭಯಾನಕ ವಾತಾವರಣ ಉಂಟಾಗಿದೆ. ಒಂದೂವರೆ ಎರಡು ತಿಂಗಳಿಂದ ಪಾವಗಡ ತಾಲ್ಲೂಕಿನಲ್ಲಿ ಇಂಥ ಅನೇಕ ಘಟನೆಗಳು ನಡೆದಿವೆ. ಅನೇಕ ಮಂಕ್ಕಳು ಸತ್ತಿದ್ದಾರೆ. ಅದೇನು ಖಂಬುದನ್ನು ಪೋಲೀಸರಾಗಲೀ, ಸರ್ಕಾರದವರಾಗಲೀ ಕಂಡುಹಿಡಿದಿಲ್ಲ. ಈ ವಿಷಯದಲ್ಲಿ ವಿಚಾರ ಮಾಡಿ ಸಂಪೂರ್ಣವಾದ ಮಾಹಿತಿಯನ್ನೊಳಗೊಂಡ ಹೇಳಿಕೆಯನ್ನು ಸರ್ಕಾರದವರು ಸದನಕ್ಕೆ ಕೊಡುವುದು ಅಗತ್ಯವಿದೆ. ಮಕ್ಕಳನ್ನು ಯಾರು ಕೊಲ್ಲುತ್ತಿದ್ದಾರೆ, ಮಕ್ಕಳಿಗೆ ಯಾತಕ್ಕೆ ಗಾಯವಾಗುತ್ತಿದೆ ಎಂಬ ಬಗ್ಗೆ ತಿಳಿಸಿದರೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ವಿಷಯದಲ್ಲಿ ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಅಪ್ಪಾಸ್ವಾಮಿ ರೆಡ್ಡಿ.— ಬಾಗೇಪಲ್ಲಿ ಚತ್ರಾವತಿ ಬಿ.ಎಡ್. ಕಾಲೇಜಿನ ಬಗ್ಗೆ...

ಅಧ್ಯಕ್ಷರು.— ಆ ವಿಷಯ ಆಗಲೇ ಚರ್ಚೆಯಾಗಿದೆ.

ಶ್ರೀ ಬಿ. ಭೈರಪ್ಪಾಜಿ.— ಅಧ್ಯಕ್ಷರೇ, ನಮ್ಮ ಸ್ನೇಹಿತರು ಹೇಳಿದ ಹಾಗೆ ಪಾವಗಡ ತಾಲ್ಲೂಕಿನಲ್ಲಿ ಜನ ಭೀತರಾಗಿದ್ದಾರೆ. ಈ ಬಗ್ಗೆ ಸರ್ಕಾರ...

ಅಧ್ಯಕ್ಷರು.— ತಾವು ದಯಮಾಡಿ ಕುಳಿತುಕೊಳ್ಳಿ. ಆ ಬಗ್ಗೆ ಮಾನ್ಯ ಒಡೆಯರಾಜ್‌ರವರು ಆಗಲೇ ಹೇಳಿದ್ದಾರೆ.

## MOTION FOR ELECTIONS

Sri A. LAKSHMI SAGAR (Minister for Law and Parliamentary Affairs).— Sir I beg to move .

> "That this House do proceed to elect five members to the Senate of Bangalore University according to the principle of propotional representation by means of single transferable vote as required under Section 21(1) (14) of the Karnataka State Universities Act. 1976".

MR. SPEAKER.— The question is .

> "That this House do proceed to elect five members to the Senate of Bangalore University according to the principle of proportional representation by means of single transferable vote as required under Section 21(1) (14) of the Karnataka State Universities Act, 1976."

*The Motion was adopted*

SRI A. LAKSHMI SAGAR (Minister for Law and Parliamentary Affairs).— Sir, 1 beg to move .

> "That this House do proceed to elect five members to. the Senate of Gulbarga University according to the principle of proportional representation by means of single transfer-